ಕಥನವಾಗಿ ಕಾಣುತ್ತದೆ. ಭಾರ್ಗವಿಯವರ ಶೀರ್ಷಿಕೆಯೇ ಅವರ ಆದ್ರ್ರಗರ್ವವನ್ನು ಸೂಚಿಸುತ್ತದೆ. ಕುಟುಂಬ ಮತ್ತು ವೃತ್ತಿಗಳಲ್ಲಿ ಸಾಗಿದ ಪ್ರಯಾಣ ಅವರಲ್ಲಿ ಹೆಣಗಾಟವಾಗುವುದಿಲ್ಲ. ಐದು ನಿಮಿಷ ಬೇಗ ಆಫೀಸ್ ಬಿಟ್ಟರೆ ಸಿಗಬಹುದಾದ ಬಸ್ಸಿಗಾಗಿ ನಡೆಸುವ ಹೋರಾಟವೇ ಇರಲಿ, ಹೆರಿಗೆಗಾಗಿ ಆಸ್ಪತ್ರೆಗೆ ಸೇರಿದವರು ಅಮ್ಮ, ಮಗಳನ್ನು ಬಸ್ಸು ಹತ್ತಿಸಲು ಮಾರ್ಕೆಟ್ ತನಕ ಬರುವುದಾಗಲಿ, ಗಂಡನಿಗೆ ತನ್ನ ತಪ್ಪನ್ನು ಅರ್ಥ ಮಾಡಿಸಲು ಮೈದುನನ ಜೊತೆ ಮೈಸೂರಿಗೆ ಹೋಗುವುದಾಗಲಿ, ಸ್ವಯಂ ನಿವೃತ್ತಿಯ ನಿರ್ಧಾರವೇ ಆಗಲಿ, ಯಾವುದನ್ನೂ ಭಾರ್ಗವಿ ಕುಂದದ ಜೀವನಪ್ರೀತಿಯಲ್ಲಿ, ಆತ್ಮವಿಶ್ವಾಸದಲ್ಲಿ ನಗು ನಗುತ್ತಲೇ ಮಾಡುತ್ತಾರೆ. ಅಗ್ನಿದಿವ್ಯವನ್ನೇ ಹಾದ ಇಬ್ಬರು ಹೆಣ್ಣುಮಕ್ಕಳು ಉಮಾಶ್ರೀ ಮತ್ತು ವಿಜಯಮ್ಮ. ಹೆಣ್ಣುಮಕ್ಕಳ ಕತೆ ಇಲ್ಲಿಗೆ ಮುಗಿಯಿತು ಎನ್ನುವ ಘಟ್ಟದಲ್ಲಿ ಇವರು ಬದುಕನ್ನು ಹೊಚ್ಚ ಹೊಸದೆಂಬಂತೆ ಕಟ್ಟಿಕೊಳ್ಳುತ್ತಾರೆ, ಗೆಲ್ಲುತ್ತಾರೆ. ಸ್ತ್ರೀಚೈತನ್ಯಕ್ಕೆ ಬರೆದ ಭಾಷ್ಯಗಳಂತೆ ಈ ಇಬ್ಬರು ಮಾತ್ರವಲ್ಲ, ಮೇಲೆ ಹೆಸರಿಸಿದ ಎಲ್ಲರೂ ಕಾಣಿಸುತ್ತಾರೆ.

ಇವುಗಳು ದರ್ಶನ ಮಾಡಿಸುವ ಸತ್ಯಕ್ಕೆ ಹಲವು ಮಗ್ಗುಲುಗಳಿವೆ. ಒಂದು, ಹೆಣ್ಣಿನ ಜೀವನನದಲ್ಲಿ ಆಗಬೇಕಾದ ಪಲ್ಲಟಗಳನ್ನು ಅವಳೇ, ತನಗೆ ಬೇಕಾಗಿ ಮಾಡಿಕೊಳ್ಳಬೇಕು, ಆಗ ಮಾತ್ರ ಎದುರಾಗುವ ಸವಾಲುಗಳನ್ನು ಆತ್ಮಶಕ್ತಿಯಿಂದ ಆರಂಭವಾಗಿ ಮಿಕ್ಕೆಲ್ಲವನ್ನೂ ಬಳಸಿ ಗೆಲ್ಲಬಹುದು. ಕಾನೂನು, ವ್ಯವಸ್ಥೆಯ ಔದಾರ್ಯ ಇವು ಹೆಣ್ಣನ್ನು ಬಲು ದೂರ ಒಯ್ಯುವುದಿಲ್ಲ ಎನ್ನುವುದು. ಎರಡನೆಯದು, ಇಪ್ಪತ್ತೊಂದಲ್ಲ ಮೂವತ್ತನೆಯ ಶತಮಾನದಲ್ಲಿಯೂ ಗಂಡಾಳಿಕೆ ಸಂಪೂರ್ಣವಾಗಿ ಅಥವಾ ಒಳಗಿನಿಂದ ಬದಲಾಗುವುದು ಕಷ್ಟ. ಅದನ್ನು ಎದುರಿಸಬೇಕಾದ್ದು ಹೆಣ್ಣಿನ ವಿಧಿ ಎನ್ನುವುದು. ಮೂರನೆಯದು, ಸೋತಂತೆ ಕಾಣುತ್ತಿರುವಾಗಲೂ, ಲೋಕ ಹಾಗೆ ತಿಳಿದಿರುವಾಗಲೂ ಆತ್ಮಶಕ್ತಿಯಿರುವ ಹೆಣ್ಣುಮಕ್ಕಳು ಒಳಗಿನಿಂದ ಖಂಡಿತವಾಗಿಯೂ ಗೆದ್ದಿರುತ್ತಾರೆ. ಅದನ್ನು ಅನೇಕ ಬಾರಿ ಅವಳೇ ಅರ್ಥ ಮಾಡಿಕೊಂಡಿರುವುದಿಲ್ಲ. ನಾಲ್ಕನೆಯದು, ಸೋಲು ಗೆಲುವುಗಳ ವ್ಯಾಖ್ಯಾನ ಗಂಡು ಮತ್ತು ಹೆಣ್ಣಿಗೆ ಬೇರೆ ಬೇರೆಯೇ ಆಗಿರುತ್ತದೆ. ಸೋತು ಗೆಲ್ಲು ಎನ್ನುವ ಗಂಡಾಳಿಕೆಯ ಅರ್ಥದಲ್ಲಲ್ಲ. ತನ್ನೊಳಗೇ ಒಂದು ವಿಶ್ವವನ್ನು, ಅದು ಲೋಕಕ್ಕೆ ಕಾಣಬಹುದು ಕಾಣದಿರಬಹುದು, ಕಟ್ಟಿಕೊಂಡು ಹೆಣ್ಣು ಅದರಲ್ಲಿ ತಾನೇ ತಾನಾಗಿ, ಯಾವ ಹಂಗಿಲ್ಲದೆ ಇರಬಲ್ಲಳು ಎನ್ನುವ ಅರ್ಥದಲ್ಲಿ. 'ಸಾವಿರ ಮುಳ್ಳಿರಲಿ ಒಂದಾರೆ ಅರಳಿದ ಹೂವಿರಲಿ ನನ ಶಿವನೆ' ಇದು ಹೆಣ್ಣಿನ ಆತ್ಮಘೋಷ.


**ಎಂ.ಎಸ್. ಆಶಾದೇವಿ**

ವಿಮರ್ಶಕಿ, ಅನುವಾದಕಿ ಎಂ.ಎಸ್. ಆಶಾದೇವಿ ವೃತ್ತಿಯಲ್ಲಿ ಅಧ್ಯಾಪಕರು. 'ಸ್ತ್ರೀಮತವನುತ್ತರಿಸಲಾಗದೆ?', 'ನಾರಿಕೇಳಾ', 'ಬೆಳಕಿಗಿಂತ ಬೆಳ್ಳಗೆ' ಅವರ ಕೆಲವು ಕೃತಿಗಳು. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.